Publication : Vijaya Karnataka
Date: Sept 12, 2014
Page No: 1 and 8, Lavalavike
Edition: All

SARA Media Net
Simply communicate...



ರಾಹುಲ್ ಬೋಸ್, ಭಾವನಾ

# ಕನ್ನಡಕ್ಕೆ ರಾಹುಲ್ ಬೋಸ್

**ಬಾಲಿವುಡ್ ಖ್ಯಾತ ನಟ ರಾಹುಲ್ ಬೋಸ್ ಸದ್ದಿಲ್ಲದೇ ಕನ್ನಡದ ಸಿನಿಮಾವೊಂದರಲ್ಲಿ ನಟಿಸಿದ್ದಾರೆ. ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಅವರ ನಿರುತ್ತರ ಚಿತ್ರದಲ್ಲಿ ಬೋಸ್ ಐಟಿ ಕಂಪೆನಿಯ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.**

**ಶರಣು ಹುಲ್ಲೂರು**
sharanappa.adnur@timesgroup.com

ರಾಹುಲ್ ಬೋಸ್ ಅಪರೂಪದ ಕಲಾವಿದ ಮಾತ್ರವಲ್ಲ, ನಿರ್ದೇಶಕ, ಚಿತ್ರ ಕತೆಗಾರ, ಸಿಂಗರ್ ಮತ್ತು ಜನಪರ ಚಳವಳಿಗಾರ. ಈವರೆಗೂ ಐವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಇವರು ನಟಿಸಿದ್ದಾರೆ. ಹಲವಾರು ಭಾಷೆಯ ಸಿನಿಮಾಗಳಲ್ಲಿ ಹಲವು ಪಾತ್ರಗಳನ್ನು ಮಾಡಿದ್ದಾರೆ. ಅಪರೂಪದ ಸಿನಿಮಾಗಳ ನಿರ್ದೇಶನ ಮಾಡಿದ್ದಾರೆ. ಚಿತ್ರಕತೆ ಬರೆದಿದ್ದಾರೆ. ರಂಗಭೂಮಿಗೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಪ್ರಾದೇಶಿಕ ಸಿನಿಮಾಗಳ ಬಗ್ಗೆ ಅಪಾರ ಒಲವು ಇರುವ ಕಾರಣ, ಕನ್ನಡ ಚಿತ್ರೋದ್ಯಮಕ್ಕೂ ಪದಾರ್ಪಣೆ ಮಾಡಿದ್ದಾರೆ. ಗಿರೀಶ ಕಾಸರವಳ್ಳಿ ಪುತ್ರ ಅಪೂರ್ವ ನಿರ್ದೇಶನದ ನಿರುತ್ತರ ಸಿನಿಮಾದಲ್ಲಿ ಐಟಿ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಲವಲvkಯ ಜತೆ ಮಾತಿಗೆ ಕೂತಾಗ...

**● ಸಹೃದಯರು ನಿಮ್ಮನ್ನು ಹೆಚ್ಚು ಗುರುತಿಸಿದ್ದು ನಟನಾಗಿಯೋ ಅಥವಾ ನಿರ್ದೇಶಕನಾಗಿಯೋ?**

ಇವೆರಡೂ ಅಲ್ಲ, ಒಳ್ಳೆಯ ಮನುಷ್ಯನಂತೆ ಕಂಡಿದ್ದಾರೆ. ತಮ್ಮ ಸಂಬಂಧಿಕನಂತೆ ನನ್ನನ್ನು ಪ್ರೀತಿಸುತ್ತಾರೆ ಅಂದರೆ, ಅಲ್ಲಿ ನಿರ್ದೇಶಕನೂ ಇರುವುದಿಲ್ಲ, ನಟನೂ ಇರುವುದಿಲ್ಲ, ಅಲ್ಲಿ ಇರುವುದು ಕೇವಲ ರಾಹುಲ್ ಬೋಸ್. ಈತನನ್ನು ನೀವು ಏನು ಬೇಕಾದರೂ ಅಂದುಕೊಳ್ಳಿ.

**● ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಚಿತ್ರತಂಡಕ್ಕೆ ಕೇಳುವ ಮೊದಲ ಪ್ರಶ್ನೆ ಏನು?**

ದುಡ್ಡಿನ ವಿಚಾರ ಬಿಟ್ಟು ಸಿನಿಮಾಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಕೇಳುತ್ತೇನೆ. ಉತ್ತಮ ಕತೆ, ಅದನ್ನು ಸಮರ್ಥವಾಗಿ ನಿಭಾಯಿಸ ಬಲ್ಲ ನಿರ್ದೇಶಕನ ಸಾಮರ್ಥ್ಯ ಮತ್ತು ಪಾತ್ರದ ಹರಿವನ್ನು ಕೇಳುತ್ತೇನೆ. ನನಗೆ ಭಾಷೆ ಮುಖ್ಯ ಅಲ್ಲ, ನಿರ್ವಹಿಸುವ ಕಾರ್ಯ ಮುಖ್ಯ.

**● ಗಿರೀಶ್ ಕಾಸರವಳ್ಳಿ ಎಂಬ ಬಹುದೊಡ್ಡ ಹೆಸರು ಇದೆ ಅನ್ನುವ ಕಾರಣಕ್ಕೆ ನಿರುತ್ತರ ಸಿನಿಮಾದಲ್ಲಿ ನಟಿಸಿದ್ದೀರಾ?**

ನಿರ್ದೇಶಕ ಅಪೂರ್ವ ಹೇಳಿದ ಕತೆ ಚೆನ್ನಾಗಿತ್ತು. ಇಲ್ಲಿ ನಾನು ಐಟಿ ಕಂಪೆನಿಯ ಅಧಿಕಾಯಾಗಿ ಕಾಣಿಸಿಕೊಂಡಿದ್ದೇನೆ.

ಮುಂದುವರಿದ ಪುಟ... 08

# ಕನ್ನಡಕ್ಕೆ ರಾಹುಲ್...



ಮೊದಲ ಪುಟದಿಂದ

ಆ ಪಾತ್ರಕ್ಕೆ ತನ್ನದೇ ಆದ ಹಿನ್ನೆಲೆ ಇದೆ. ಪಾತ್ರದ ಕುರಿತು ಹೆಚ್ಚೇನೂ ಹೇಳಲಾರೆ. ಅದರ ಜತೆಗೆ ಗಿರೀಶ್ ಕಾಸರವಳ್ಳಿ ಎಂಬ ಹೆಸರೂ ಇರಬಹುದು.

**● ಪ್ರಾದೇಶಿಕ ಸಿನಿಮಾಗಳ ಬಗ್ಗೆ ಇಷ್ಟೊಂದು ಒಲವು ಯಾಕೆ?**

ಪ್ರಾದೇಶಿಕ ಸಿನಿಮಾಗಳಲ್ಲಿ ತನ್ನದೇ ಆದ ಸೊಗಡಿದೆ. ತೀರಾ ಸಂಕೀರ್ಣವಾದ ಸಮಸ್ಯೆಗಳನ್ನು ಎತ್ತಿಕೊಂಡು ಕೆಲಸ ಮಾಡುತ್ತಾರೆ. ವ್ಯಾಪಾರದ ಆಚೆಯೂ ಯೋಚಿಸುತ್ತಾರೆ. ಹೀಗಾಗಿಯೇ ನಾನು ಇಂತಹ ಸಿನಿಮಾಗಳನ್ನು ಸಾಮಾನ್ಯವಾಗಿ ತಪ್ಪಿಸಿಕೊಳ್ಳುವುದಿಲ್ಲ, ನನ್ನ ಸಿನಿಮಾಗಳ ಯಾದಿಯನ್ನು ನೋಡಿದರೆ, ಹೆಚ್ಚು ಪ್ರಾದೇಶಿಕ ಭಾಷೆಯ ಸಿನಿಮಾಗಳೇ ಇವೆ. ಇತ್ತೀಚೆಗಷ್ಟೇ ಬೆಂಗಾಲಿ ಸಿನಿಮಾದಲ್ಲಿ ನಟಿಸಿದ್ದೇನೆ. ಅದು ಪತ್ತೇದಾರನ ಪಾತ್ರ. ಈಗ ಕನ್ನಡಕ್ಕೆ ಬಂದಿದ್ದೇನೆ. ನಾಳೆ ಮತ್ತೊಂದು ಸಿನಿಮಾವನ್ನೂ ಮಾಡಬಹುದು.

**● ಕನ್ನಡದ ಸಿನಿಮಾಗಳನ್ನು ನೋಡಿದ್ದೀರಾ?**

ಚಿತ್ರೋತ್ಸವದಲ್ಲಿ ಸಿನಿಮಾ ನೋಡಿದ್ದೇನೆ. ನನಗೆ ಚೆನ್ನಾಗಿ ನೆನಪಿದೆ ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ನಡೆದ ಉತ್ಸವದಲ್ಲಿ ಗಿರೀಶ್ ಕಾಸರವಳ್ಳಿ ಅವರ ಸಿನಿಮಾ ನೋಡಿದ್ದೇನೆ. ಹೀಗಾಗಿಯೇ ಅವರ ಮಗನ ನಿರ್ದೇಶನದ ಸಿನಿಮಾದಲ್ಲಿ ನಟಿಸಲು ಬೇಗ ಒಪ್ಪಿಕೊಂಡಿದ್ದು.

**● ಸಿನಿಮಾ ರಂಗದ ವಿಸ್ತಾರಕ್ಕೆ ತುರ್ತಾಗಿ ಮಾಡಬೇಕಿರುವ ಕೆಲಸ ಯಾವುದು?**

ಸಮರ್ಥವಾಗಿ ಇಂಟರ್‌ನೆಟ್ ಬಳಕೆ ಮಾಡಬೇಕು. ಸಿನಿಮಾ ನಿರ್ಮಾಣ ಮಾಡಲು ಖರ್ಚಾದ ಎರಡರಷ್ಟು ಹಣವನ್ನು ಸಿನಿಮಾ ಬಿಡುಗಡೆಗೆ ವ್ಯಯಿಸುವ ಅನಿವಾರ್ಯತೆ ಎದುರಾಗಿದೆ. ಈಗ ಎಲ್ಲೆಲ್ಲೂ ಇಂಟರ್‌ನೆಟ್ ಇದೆ. ಈ ಕ್ಷೇತ್ರಕ್ಕಾಗಿಯೇ ಸಿನಿಮಾ ಮಾಡಬೇಕು. ಸಿನಿಮಾ ರಸಿಕ ಎಲ್ಲೇ ಇದ್ದರೂ ತನ್ನಿಷ್ಟದ ಸಿನಿಮಾವನ್ನು ನೋಡುವಂತಹ ವಾತಾವರಣ ನಿರ್ಮಾಣ ಆಗಬೇಕು. ಆ ರೀತಿಯ ಸಿನಿಮಾಗಳ ತಯಾರಿಕೆ ಹೆಚ್ಚಾಗಬೇಕು.

**● ಬಹುತೇಕ ನಿಮ್ಮ ಪಾತ್ರಗಳಿಗೆ ನೀವೇ ಡಬ್ ಮಾಡುತ್ತೀರಿ. ಕನ್ನಡದಲ್ಲೂ ಆ ಪ್ರಯೋಗ ನಡೆಯುತ್ತಾ?**

ಮೊದಲಿನಿಂದಲೂ ನನಗೆ ಭಾಷೆಗಳ ಬಗ್ಗೆ ಕುತೂಹಲ. ಒಂದೊಂದು ಭಾಷೆಗೂ ತನ್ನದೇ ಆದ ಲಯವಿದೆ. ಅದನ್ನು ನನ್ನ ನಾಲಿಗೆಯೂ ಹೇಳಬೇಕು ಅನ್ನುವುದು ನನ್ನ ಆಸೆ. ಕಮಲ್ ಹಾಸನ್ ಅವರ ವಿಶ್ವರೂಪಂ ಸಿನಿಮಾದಲ್ಲಿ ತಮಿಳಿನಲ್ಲಿ ಡಬ್ ಮಾಡಿದೆ. ತಮಿಳಿಗಿಂತ ಕನ್ನಡವು ಸುಲಭ ಅಂದುಕೊಂಡಿದ್ದೇನೆ. ನಿರ್ದೇಶಕರು ಒಪ್ಪಿಕೊಂಡರೆ, ಡಬ್ ಮಾಡುತ್ತೇನೆ. ■